ಸಾಮಾನ್ಯ ಇದ್ದ ಕಾರಣ ಬಾಗಿಲು ತೆರೆದಿರುತ್ತಿತ್ತು. ತೆರೆದ ಬಾಗಿಲು ನೇರ ಹಾಲಿಗೆ ತೆರೆಯುತ್ತದೆ, ಹಾಲಿಗೇ ಒಂದು ಬಾಲ್ಕನಿ ಅಂಟಿದೆ. ಒಳಗೆ ಬಂದ ತಾಯಿ–ಮಗಳು ನೋಡಿದ್ದೇನು? ಪುಟ್ಟ ಮಗು ಬಾಲ್ಕನಿಯಲ್ಲಿ ಬಟ್ಟೆ ಒಣಹಾಕಲು ಇಟ್ಟಿದ್ದ ಸಣ್ಣ ಸ್ಟೂಲಿನ ಮೇಲೆ ನಿಂತು, ಬಾಲ್ಕನಿಯಿಂದ ಬಾಗಿ ಕೆಳಗೇನೋ ನೋಡುತ್ತಾ ಬೀಳುವಂತಿದೆ. ಮಗಳ ಹೃದಯ ಬಾಯಿಗೆ ಬಂದಿತ್ತು. ಒಂದೇ ಏಟಿಗೆ ಹಾರಿ ಮಗುವನ್ನು ಎಳೆದುಕೊಂಡವಳ ಇಡೀ ದೇಹ ನಡುಗುತ್ತಿತ್ತು. ಅಪ್ಪ ಎಲ್ಲಿ ಎಂದು ನೋಡಿದರೆ, ಪಕ್ಕದ ಕೋಣೆಯಲ್ಲಿ ತಮ್ಮ ಫೇಸ್‌ಬುಕ್‌ನಲ್ಲಿ ಆರಾಮಾಗಿ ಮುಳುಗಿ ಹೋಗಿದ್ದಾರೆ, ಈ ಕ್ಷಣದ ಕೋಲಾಹಲವೂ ಅವರನ್ನು ಕದಲಿಸಿಲ್ಲ!

ಕೋಪಾವೇಶದಿಂದ ಮಗಳು ಬಾಯಿಗೆ ಬಂದಂತೆ ಅಪ್ಪನನ್ನು ಬೈದಳು. ಅಮ್ಮ ಹೇಳಿದ ಅಪ್ಪನ ಅಡಿಕ್ಷನ್ ಆಕೆಗೆ ದೊಡ್ಡ ವಿಷಯವಾಗಿ ಇಲ್ಲಿಯವರೆಗೂ ಕಾಣದೇ ಇದ್ದದ್ದು, ಈಗ ಅದರ ಅಪಾಯ ಅರಿವಾಗಿತ್ತು. ನಡೆದದ್ದೇನು ಎಂದು ಮೆಲ್ಲನೆ ಅರಿವಾದಂತೆ, ವಿನೋದ್ ಕೂಡಾ ನಡುಗಿ ಹೋದರು. ಅಪಮಾನದಿಂದ ಮಾತು ಹೊರಡದಾಗಿತ್ತು. ಸುಮಿತ್ರಾ ಇಷ್ಟು ದಿನ ತಾನು ಒಡಲಲ್ಲಿ ಹಿಡಿದಿಟ್ಟ ನೋವನ್ನೆಲ್ಲ ಕಾರಿದಳು. ಹೆಂಡತಿ–ಮಗಳು ಪಟ್ಟು ಹಿಡಿದು ಆ ದಿನ ಅವರ ಕೈಯಿಂದಲೇ ಫೇಸ್‌ಬುಕ್ ಅಕೌಂಟ್ ಡಿಲೀಟ್ ಮಾಡಿಸಿದರು.

ಕಥೆ ಅಲ್ಲಿಗೆ ಮುಗಿಯಲಿಲ್ಲ. ಡಿಲೀಟ್ ಮಾಡಿದ ಒಂದು ತಿಂಗಳ ಒಳಗೆ ಮತ್ತೆ ಫೇಸ್‌ಬುಕ್‌ಗೆ ಹೋದರೆ, ಅದು ಮತ್ತೆ ಜೀವಂತವಾಗಿ ಜಾಗೃತವಾಗುತ್ತದೆ. ಈಗ ಮತ್ತೊಂದು ನಿರ್ಧಾರಕ್ಕೆ ಬರಬೇಕಾಯಿತು. ಆತನ ಕೈಯಿಂದ ಸ್ಮಾರ್ಟ್‌ಫೋನ್ ಕಿತ್ತುಕೊಂಡು 'ಬೇಸಿಕ್ ಫೋನ್' ಕೈಗಿಟ್ಟರು. ಸುಮಿತ್ರಾ ಮನೆಯಲ್ಲಿದ್ದ ಲ್ಯಾಪ್‌ಟಾಪ್ ಪ್ಯಾಕ್ ಮಾಡಿ ಮಗಳ ಮನೆಗೆ ಕಳುಹಿಸಿದಳು. ಸುಮಿತ್ರಾ, ವಿನೋದ್‌ಗೆ 'ವೆಬ್‌ಸೀರೀಸ್, ಯೂಟ್ಯೂಬ್ ನೋಡಬೇಕು ಅಂದರೆ, ಅಗತ್ಯದ ಇಮೇಲ್ ಕಳುಹಿಸಬೇಕು ಎಂದರೆ ನನ್ನ ಡೆಸ್ಕ್‌ಟಾಪ್ ಬಳಸು' ಎಂದಳು. ಇವೆಲ್ಲ ಬಲು ಕಠಿಣ ಕ್ರಮಗಳಾಗಿದ್ದವು.

ಈಗ ಬೆಳಗ್ಗೆ ಎದ್ದಾಗ ವಿನೋದ್‌ಗೆ ಮಾಡಲು ಏನೂ ಇರಲಿಲ್ಲ. ಎದ್ದವನು ತಿಂಡಿ ತಿಂದು ಮತ್ತೆ ಮಲಗಿ ಬಿಡುತ್ತಿದ್ದ. ಯಾವುದರಲ್ಲೂ ಉತ್ಸಾಹವಿಲ್ಲ. ವಿನೋದ್ ಖಿನ್ನತೆಗೆ ಜಾರುತ್ತಿದ್ದರು. ಇದೂ ಕೂಡಾ ಅಪಾಯದ ಮಾನಸಿಕ ಸ್ಥಿತಿ. ಕೆಲವೊಮ್ಮೆ ಮಗುವಿನ ಕೈಯಿಂದ ಬೊಂಬೆ ಕಿತ್ತುಕೊಂಡರೆ ರಚ್ಚೆ ಹಿಡಿಯುವಂತೆ ಆತನ ವರ್ತನೆ ಇತ್ತು. ಚಟವನ್ನು ಬಿಟ್ಟಾಗ ಆಗುವ 'ವಿತ್‌ಡ್ರಾವಲ್' ಲಕ್ಷಣಗಳೆಲ್ಲ ಅವರಲ್ಲಿದ್ದವು. ಏನೋ ಸಣ್ಣ ವಿಷಯಕ್ಕೆ ಏಕಾಏಕಿ ಹಾರಾಡುವುದು, ತಲೆ ಚಚ್ಚಿಕೊಳ್ಳುವುದು, ಒಂದೆರಡು ಬಾರಿ ದೊಡ್ಡದಾಗಿ ಬಾಯಿ ತೆರೆದು ಜೋರಾಗಿ ಅಳುವುದಕ್ಕೆ ಆತ ಆರಂಭಿಸಿದಾಗಲಂತೂ ಸುಮಿತ್ರಾಳ ಜಂಘಾಬಲವೇ ಉಡುಗಿಹೋಯಿತು. ಏನು ಮಾಡುವುದು? ಆತನನ್ನು ಯಾವುದಾದರೂ ಸಕಾರಾತ್ಮಕ ಹವ್ಯಾಸದಲ್ಲಿ, ಆರೋಗ್ಯಕರ ದಿನಚರಿಯಲ್ಲಿ ತೊಡಗಿಸುವುದು ಹೇಗೆ? ಇಬ್ಬರೂ ಸಾಕಷ್ಟು ತಲೆ ಕೆಡಿಸಿಕೊಂಡೆವು. 'ಈ ಹಳೆಯ ವ್ಯಸನದ ನ್ಯೂರಲ್ ನೆಟ್‌ವರ್ಕ್ ಕತ್ತರಿಸಬೇಕು, ಹೊಸ ನರಮಾರ್ಗಗಳು ಸೃಷ್ಟಿಯಾಗಬೇಕು' ಎಂದೆ. ನಾನು ಓದಿದ ನ್ಯೂರೋಪ್ಲಾಸ್ಟಿಸಿಟಿ ಕುರಿತ ಪುಸ್ತಕಗಳನ್ನು ಆಕೆಯೂ ಓದಿ ಅರಿತಿದ್ದರೂ, ಅದನ್ನು ಅಳವಡಿಸುವುದು ಹೇಗೆ ಎಂದು ಇಬ್ಬರೂ ಪರದಾಡಿದೆವು.

ವಿನೋದ್ ತನ್ನನ್ನು ತಾನು ವ್ಯಸನವಿಲ್ಲದೆ ಇಟ್ಟುಕೊಳ್ಳುವಂತಹ ಒಂದು ದಿನಚರಿ ಬೇಕಿತ್ತು. 'ಸಮಾಜ ಸೇವೆ' ಎಂದು ಶಾಲೆಗಳಿಗೆ ಹೋಗಿ ಕಲಿಸಲು ಉತ್ತೇಜಿಸಿದಳು. ಆದರೆ ಆತ ಪ್ರಯತ್ನ ಹಾಕಲಿಲ್ಲ. ಮನೆಯ ಹತ್ತಿರವೇ ಕುರುಡರ ಒಂದು ಶಾಲೆ ಇತ್ತು. ಅಲ್ಲಿಯ ಪಠ್ಯಪುಸ್ತಕಗಳನ್ನು ತಂದು 'ಅವನ್ನು ಆಡಿಯೋ ಪುಸ್ತಕ ಮಾಡು, ನಿನ್ನ ಕಂಠ ಸೊಗಸಾಗಿದೆ. ಕಾಲೇಜಿನಲ್ಲಿ ಪಾಠ ಮಾಡಿದವನು, ಕನ್ನಡದ ಉಚ್ಚಾರ ಚೆನ್ನಾಗಿದೆ' ಎಂದು ಹುರಿದುಂಬಿಸಿದಳು. ಆತನಿಗೆ ಆ ಕಾರ್ಯದಲ್ಲಿ ಉತ್ಸಾಹವೇ ಇರಲಿಲ್ಲ. 'ಹೊರಗೆಲ್ಲಾದರೂ ಪ್ರಯಾಣ ಮಾಡೋಣ, ಈ ವಾತಾವರಣದಿಂದ ದೂರ ಹೋಗೋಣ' ಎಂದರೆ 'ದುಡ್ಡು ದಂಡ' ಎನ್ನುವರು.

## ಕತ್ತಲ ಹಾದಿಯಲ್ಲೊಂದು ಕಿರಣ

ಹೀಗೆಲ್ಲ ಪರದಾಡುತ್ತಿರುವಾಗ, ಒಂದು ದಿನ ಗಂಡನ ಹುಟ್ಟೂರಿಗೆ, ಸಂಬಂಧಿಕರ ಮನೆಯ ಮದುವೆಗೆಂದು ಹೋಗುವ ಸಂದರ್ಭ ಒದಗಿತು. ಹುಟ್ಟೂರಿನ ಆ ಮನೆಯಲ್ಲಿ ಗಂಡನ ಅಣ್ಣ ಮತ್ತು ಆತನ ಸಂಸಾರ ಈಗಲೂ ವಾಸವಾಗಿದ್ದರು. ಅಂಗಳದ ತುಂಬಾ ಇದ್ದ ಗಿಡಮರಗಳನ್ನು ನೋಡುತ್ತಾ, ಒಂದು ಮರದ ಕಾಯಿ ಹುಣಿಸೆಕಾಯಿಯಂತೆ ಕಂಡರೂ, ಚಕ್ರಾಕಾರವಾಗಿ ತಿಳಿ ಗುಲಾಬಿ ಬಣ್ಣದಲ್ಲಿ ಇರುವುದು ನೋಡಿ, ಸುಮಿತ್ರಾ 'ಅರೆ, ಇದು ಯಾವ ಮರ?' ಎಂದು ಕೇಳಿದ್ದಳು. ಅವರ ಅಣ್ಣ 'ಅದು ಮೀಠಿ ಇಮ್ಲಿ. ವಿನೋದ್ ಕಾಲೇಜು ಪ್ರವಾಸದಲ್ಲಿ ಒರಿಸ್ಸಾಗೆ ಹೋಗಿದ್ದಾಗ ತಂದಿದ್ದ' ಎಂದರು. 'ಅಯ್ಯೋ ತೋಟದಲ್ಲಿ ವಿನೋದ್ ಹಾಕಿರುವ ಮರಗಳನ್ನು ನೋಡಿಲ್ಲವೆ, ಎಲ್ಲಿ ಏನು ವಿಚಿತ್ರವಾದ ಹಣ್ಣು ತಿಂದರೂ ಬೀಜ ಹಿಡಿದು ಬರುತ್ತಿದ್ದ...' ಎಂದು ಅಣ್ಣ ಮುಂದುವರೆಸಿ ಹೇಳಿದ್ದರು.

ಮದುವೆಗೆ ಬಂದಿದ್ದ ಅವರ ಅಕ್ಕ 'ಹಿತ್ತಲಲ್ಲಿ ಚಪ್ಪರಕ್ಕೆ ಹಬ್ಬಿಸಿರೋ ಬಾತುಕೋಳಿ ಹೂವಿನ ಬಳ್ಳಿ ನೋಡಿದ್ದೀಯ? ಅದೆಲ್ಲಿಂದಲೋ ಬೀಜ ತಂದು ಹಾಕಿದ್ದ'.

ವಿನೋದನ ಮುಖ ಕೂಡಾ ಸಣ್ಣಗೆ ಅರಳಿದ್ದನ್ನು ಸುಮಿತ್ರಾ ಗಮನಿಸಿದಳು. 'ಎಲ್ಲಿ ತೋರಿಸು' ಎಂದು ವಿನೋದನನ್ನೇ ಹಿತ್ತಲಿಗೆ ಎಳೆ ತಂದಳು. ಅಲ್ಲಿ ನಿಜಕ್ಕೂ ಬಾತುಕೋಳಿಯಂತಹ ಹೂವುಗಳು ಚಪ್ಪರದಿಂದ ಕೆಳಕ್ಕೆ ಜೋತಾಡುತ್ತಿದ್ದವು. 'ಇದರ ಬೀಜ ಹೇಗಿರುತ್ತೆ?' ಅನ್ನುತ್ತಿರುವಂತೆ ವಿನೋದ್ ಉತ್ಸಾಹದಿಂದ ಅಲ್ಲೇ ಪಾತ್ರೆಗಳಂತೆ ನೇತಾಡುತ್ತಿದ್ದ ಒಂದು ಒಣಗಿದ ಕಾಯಿಯನ್ನು ಕಿತ್ತುಕೊಂಡು ಅದರ ತುಂಬಾ ಇದ್ದ ನೂರಾರು ಬೀಜಗಳನ್ನು ಆಕೆಯ ಅಂಗೈಗೆ ಸುರಿದ.

ಮದುವೆಯ ಹೊಸದರಲ್ಲಿ ವಿನೋದ್‌ಗೆ ಕೈತೋಟದಲ್ಲಿ ಆಸಕ್ತಿ ಇದ್ದದ್ದು ಸುಮಿತ್ರಾಗೆ ನೆನಪಾಯಿತು. ಬಾಡಿಗೆ ಮನೆಯಲ್ಲಿ ಕಾಂಪೌಂಡಿತ್ತು, ಬಹಳಷ್ಟು ಗಿಡಗಳನ್ನು ಬೆಳೆಸಿದ್ದ. ಆದರೆ ಸಮಯ ಸರಿದಿತ್ತು, ಬದುಕು ಬದಲಾಗಿತ್ತು. ಮುಂದೆಲ್ಲ ಫ್ಲ್ಯಾಟ್‌ಗಳಲ್ಲಿ, ಆಗಸದಲ್ಲಿಯೇ ವಾಸ ಮಾಡಿದ್ದರು. ಆಮೇಲೊಂದು ಸೈಟ್ ತೆಗೆದುಕೊಂಡರೂ, ಇಡೀ ಸೈಟ್‌ನಲ್ಲಿ ಮನೆ ಕಟ್ಟಿಸಿ ಗಿಡ ಹಾಕಲು ಜಾಗವೇ ಇರಲಿಲ್ಲ. ಊರಿನಿಂದ ಸುಮಿತ್ರಾ ಹಿಂದಿರುಗಿ ಬಂದಾಗ, 'ತಾರಸಿಯ ಮೇಲೆ ಕೈದೋಟ ಮಾಡಬಹುದಲ್ಲ' ಎಂದೆ. ನನ್ನ ಹಿರಿಯ ಸ್ನೇಹಿತರಾದ ಕೆ.ಎನ್. ಮಾಲತಿಯವರು ತಮ್ಮ ಮನೆಯ ತಾರಸಿಯ ಮೇಲೆ ಅದ್ಭುತದ ಕೈದೋಟ ಮಾಡಿದ್ದರು. ಅವರ ಬಗ್ಗೆ ದೀರ್ಘವಾಗಿ ಬರೆದಿದ್ದೆ, ಆ ಪುಸ್ತಕ ಕೊಟ್ಟೆ. ನನ್ನ ಇನ್ನೊಂದು ಪುಸ್ತಕದಲ್ಲಿದ್ದ ಹರ್‌ಪ್ರೀತ್ ಅಹ್ಲುವಾಲಿಯ ಅವರ ಕಥೆಯನ್ನು ಸುಮಿತ್ರಾ ಗುರುತಿಸಿದಳು. ನರ್ಸ್ ಚುಚ್ಚಿದ ತಪ್ಪು ಇಂಜೆಕ್ಷನ್ ಹರ್‌ಪ್ರೀತ್ ಅವರ ಪುಟ್ಟ ಮಗುವಿನ ಮೆದುಳಿಗೆ ಶಾಶ್ವತ ಹಾನಿ ಮಾಡಿತ್ತು. ಬದುಕು ಬರಿದಾಗಿತ್ತು. ಅಗಾಧ ದುಖದಲ್ಲಿ ಮುಳುಗಿದ್ದ ಆ ತಾಯಿ ಖಿನ್ನತೆಯಿಂದ ಹೊರಬರಲು, ಮೆದುಳು ಪೂರ್ಣ ಹಾನಿಗೊಂಡ ಮಗುವಿನ ಮುಖದಲ್ಲಿ ಸಣ್ಣ ನಗುವನ್ನು ಕಾಣಲು, ತಾರಸಿಯ

